# ಕುಲಾಲ ಸಮಾಜ ಬೆಂಗಳೂರು (ರಿ)

ನೋಂ. ಕಛೇರಿ. 14-15, 'ಕುಲಾಲ ಸಮಾಜ ಭವನ', ಪರಮಹಂಸ ನಗರ, ಸುಬ್ರಹ್ಮಣ್ಯಪುರ ಮುಖ್ಯ ರಸ್ತೆ, ಉತ್ತರಹಳ್ಳಿ, ಬೆಂಗಳೂರು-560061

ಆಡಳಿತ ಕಛೇರಿ: ನಂ. 5/2, ಅಗರವಾಲ್ ಭವನ, 3ನೇ ಮಹಡಿ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055

E-mail: kulalasamaja@gmail.com    Website: www.kulalasamaja.com

ಅಧ್ಯಕ್ಷರು : ಜಿ. ಈಶ್ವರ ಮೂಲ್ಯ - 9880603076 | ಕಾರ್ಯದರ್ಶಿ : ಶಂಕರ್ ಕುಲಾಲ್ ಜನ್ನಾಡಿ - 9945689480 | ಕೋಶಾಧಿಕಾರಿ : ರಮಾನಂದ ಕುಲಾಲ್ - 9740669480


## ಮನವಿ

ಆತ್ಮೀಯ ಕುಲಾಲ ಬಂಧುಗಳೇ,

ವಿಷಯ: **ಕುಲಾಲ ಸಮಾಜ ಬೆಂಗಳೂರು (ರಿ) ಇದರ ವತಿಯಿಂದ ಕುಲಾಲ ಸಮುದಾಯದ ಅಭ್ಯುದಯಕ್ಕಾಗಿ ಸಮುದಾಯದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವ ಯೋಜನೆಗೆ ಸಹಭಾಗಿತ್ವ ವಹಿಸಲು ಮನವಿ.**

------

'ಮನುಕುಲದ ಪ್ರಥಮ ವಿಜ್ಞಾನಿ' ಎಂಬ ಹೆಗ್ಗಳಿಕೆಯ ನಮ್ಮ ಸಮುದಾಯಕ್ಕೆ ಸೇರಿದ ಹೆಚ್ಚಿನ ಸಂಖ್ಯೆಯ ಕುಟುಂಬಗಳು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದು ಅತೀವ ಆರ್ಥಿಕ ಮುಗ್ಗಟ್ಟಿನಿಂದಾಗಿ ಬಡತನದ ಜೀವನ ಸಾಗಿಸುತ್ತಿರುವುದು ನಮಗೆಲ್ಲಾ ತಿಳಿದಿರುವ ವಿಷಯ. ಬಡತನದಲ್ಲಿರುವ ನಮ್ಮ ಸಮುದಾಯದ ಕುಟುಂಬಗಳು ಅಭಿವೃದ್ಧಿ ಹೊಂದಿದ ಇತರ ಸಮುದಾಯಗಳಂತೆ ಸಮಾಜದಲ್ಲಿ ಮುಂದುವರಿಯುವಂತಾಗಲು ಇರುವ ಏಕೈಕ ದಾರಿಯೆಂದರೆ ನಮ್ಮ ಸಮುದಾಯದ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದು ಮಾತ್ರ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಕುಟುಂಬಗಳ ಆರ್ಥಿಕ ಮುಗ್ಗಟ್ಟು ಅವರ ಮಕ್ಕಳ ಉತ್ತಮ ಶಿಕ್ಷಣಕ್ಕೆ ಪ್ರಮುಖ ಅಡ್ಡಿಯಾಗಿರುತ್ತದೆ. ಹಿಂದಿನ ಸರ್ಕಾರಗಳು ಜಾರಿಗೆ ತಂದಿರುವ ವಿದ್ಯಾಭ್ಯಾಸದಲ್ಲಿ ಮೀಸಲಾತಿ ನೀತಿ ಮತ್ತು ವೃತ್ತಿಪರ ಶಿಕ್ಷಣಕ್ಕೆ ಸಾಮಾನ್ಯ ಪ್ರವೇಶ ಪರೀಕ್ಷಾ ನೀತಿ ಸ್ವಲ್ಪ ಮಟ್ಟಿಗೆ ನಮ್ಮ ಸಮುದಾಯದ ವಿದ್ಯಾರ್ಥಿಗಳು ವೃತ್ತಿಪರ ಶಿಕ್ಷಣಕ್ಕೆ ಪ್ರವೇಶ ಪಡೆದು ವಿದ್ಯಾವಂತರಾಗಿ ಉತ್ತಮ ನೌಕರಿಗಳನ್ನು ಪಡೆಯಲು ಸಹಾಯಕವಾಗಿರುವುದು ಗಮನಾರ್ಹ. ಆದಾಗ್ಯೂ ಅತೀ ಗ್ರಾಮೀಣ ಪ್ರದೇಶಗಳಲ್ಲಿ ಬಡತನದಲ್ಲಿ ಜೀವನ ಸಾಗಿಸುತ್ತಿರುವ ಕುಟುಂಬಗಳು ತಮ್ಮ ಆರ್ಥಿಕ ಮುಗ್ಗಟ್ಟಿನಿಂದಾಗಿ ತಮ್ಮ ಮಕ್ಕಳಿಗೆ ಶಿಕ್ಷಣ ನೀಡಲು ಸಾಧ್ಯವಾಗದೇ ಇರುವುದು ನಮಗೆಲ್ಲ ತಿಳಿದ ವಿಚಾರ.

ಕುಲಾಲ ಸಮಾಜ ಬೆಂಗಳೂರು (ರಿ) 1993ರಲ್ಲಿ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಸಂಘದ ಸಂಪನ್ಮೂಲ ಲಭ್ಯತೆಗೆ ಅನುಗುಣವಾಗಿ ಗ್ರಾಮೀಣ ಪ್ರದೇಶದ ನಮ್ಮ ಸಮುದಾಯದ ವಿದ್ಯಾರ್ಥಿಗಳಿಗೆ ಅಲ್ಪ ಮೊತ್ತದ ವಿದ್ಯಾರ್ಥಿವೇತನ ನೀಡುವುದರ ಮೂಲಕ ಸಮುದಾಯದ ಬಡ ಕುಟುಂಬಗಳ ಮಕ್ಕಳು ವಿದ್ಯಾವಂತರಾಗಲು ತನ್ನ ಕೈಲಾದ ಸಹಾಯ ಮಾಡುತ್ತಾ ಬಂದಿರುತ್ತದೆ. ನಂತರದಲ್ಲಿ ಸಮಾಜವು ಈ ಉದ್ದೇಶಕ್ಕಾಗಿ **"ವಿದ್ಯಾ ನಿಧಿ"**ಯನ್ನು ಸಹ ಸ್ಥಾಪಿಸಿ, ಸಮಾಜ ಬಾಂಧವರಿಂದ ಮತ್ತು ಸಮಾಜದ ಹಿತೈಷಿಗಳಿಂದ ದೇಣಿಗೆ ಸಂಗ್ರಹಿಸಿ ಸಾಧ್ಯವಾದಷ್ಟು ಪ್ರಮಾಣದ ವಿದ್ಯಾರ್ಥಿವೇತನ ಹಂಚಿಕೆ ಮಾಡುತ್ತಾ ಬಂದಿರುತ್ತದೆ. ಸಮಾಜದ ಸದಸ್ಯರ ಹಾಗೂ ಹಿತೈಷಿಗಳ ಪ್ರಾಯೋಜಕತ್ವದಲ್ಲಿ ಮತ್ತು ಸಂಘದ ಸಂಪನ್ಮೂಲದಿಂದ ಪ್ರಥಮ ಪಿಯುಸಿ ಹಾಗೂ ವೃತ್ತಿಪರ/ಪದವಿ ಶಿಕ್ಷಣಕ್ಕೆ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವ ಅತೀ ಗ್ರಾಮೀಣ ಪ್ರದೇಶಗಳ ಕುಲಾಲ ಸಮುದಾಯದ ಬಡ ಕುಟುಂಬದ ವಿದ್ಯಾರ್ಥಿ/ವಿದ್ಯಾರ್ಥಿನಿಯರ ವಿದ್ಯಾಭ್ಯಾಸಕ್ಕೆ ಸ್ವಲ್ಪ ಮಟ್ಟಿನ ಆರ್ಥಿಕ ಸಹಾಯ ಒದಗಿಸುವ ಉದ್ದೇಶದಿಂದ ಕುಲಾಲ ಸಮಾಜ ಬೆಂಗಳೂರು (ರಿ) ಪ್ರಾರಂಭಿಕವಾಗಿ ಪ್ರತಿ ವಿದ್ಯಾರ್ಥಿಗೆ ಸುಮಾರು ರೂ. 2,000/- ಗಳಂತೆ ವಿದ್ಯಾರ್ಥಿವೇತನ ವಿತರಿಸುವ ಅಭಿಯಾನವನ್ನು ಪ್ರಾರಂಭಿಸಿದ್ದು, ಕಳೆದೆರಡು ವರ್ಷಗಳಲ್ಲಿ 10ನೇ ತರಗತಿ ತೇರ್ಗಡೆಯಾಗಿ ಮತ್ತು ಪ್ರಥಮ ಪಿಯುಸಿ ಹಾಗೂ ದ್ವಿತೀಯ ಪಿಯುಸಿ ತೇರ್ಗಡೆಯಾಗಿ ಪದವಿ ಶಿಕ್ಷಣಕ್ಕೆ ಪ್ರವೇಶ ಪಡೆದ ಸುಮಾರು 85 ವಿದ್ಯಾರ್ಥಿಗಳಿಗೆ ತಲಾ ರೂ. 2,000/- ರಂತೆ ವಿದ್ಯಾರ್ಥಿ ವೇತನ ವಿತರಿಸಿರುತ್ತದೆ. ಮುಂಬರುವ ವರ್ಷಗಳಲ್ಲಿ ಸಮಾಜವು ಈ ಅಭಿಯಾನಕ್ಕೆ ಇನ್ನೂ ಹೆಚ್ಚಿನ ಒತ್ತು ನೀಡಿ ಗರಿಷ್ಠ ಸಂಖ್ಯೆಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸುವ ಗುರಿ ಹೊಂದಿರುತ್ತದೆ.

ತಾನು ಹುಟ್ಟಿ ಬಂದ ಸಮುದಾಯದಲ್ಲಿ ಆರ್ಥಿಕವಾಗಿ ದುರ್ಬಲರಾಗಿರುವ ಕುಟುಂಬಗಳ ಅಭಿವೃದ್ಧಿಯ ದೃಷ್ಟಿಯಿಂದ ಅಂತಹ ಕುಟುಂಬಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಬೇಕಾಗಿರುವುದು ಆರ್ಥಿಕವಾಗಿ ಸಧೃಡರಾಗಿರುವ ಪ್ರತಿಯೊಬ್ಬ ಸಮಾಜ ಬಾಂಧವರ ಸಾಮಾಜಿಕ ಭಾದ್ಯತೆಯಾಗಿರುತ್ತದೆ. ಈ ನಿಟ್ಟಿನಲ್ಲಿ ಆರ್ಥಿಕವಾಗಿ ಸಬಲರಾಗಿರುವ ಸಹೃದಯಿ ದಾನಶೀಲ ಕುಲಾಲ ಬಂಧುಗಳು ತಮ್ಮ ಸಾಮಾಜಿಕ ಭಾದ್ಯತೆಯನ್ನು ಘೋಷಿಸುವ ಮೂಲಕ ಕುಲಾಲ ಸಮಾಜ ಬೆಂಗಳೂರು (ರಿ) ಹಮ್ಮಿಕೊಂಡಿರುವ ಈ ಸಮಾಜಮುಖಿ ಉಪಕ್ರಮದಲ್ಲಿ ತಮ್ಮ ಸಹಭಾಗಿತ್ವ ನೀಡಿ ಸಹಕರಿಸಬೇಕೆಂದು ವಿನಮ್ರವಾಗಿ ವಿನಂತಿಸುತ್ತಾ, ತಮ್ಮ ಸಾಮಾಜಿಕ ಭಾದ್ಯತೆಯನ್ನು ಕುಲಾಲ ಸಮಾಜ ಬೆಂಗಳೂರು (ರಿ) ಮುಖಾಂತರ ಪೂರೈಸಲು ಇಚ್ಛಿಸುವ ಸಹೃದಯಿ ಸಮಾಜ ಬಾಂಧವರು ಸಮಾಜದ ಪದಾಧಿಕಾರಿಗಳನ್ನು ಸಂಪರ್ಕಿಸಲು ಅಥವಾ ತಾವು ನೀಡಲಚ್ಛಿಸುವ ವಿದ್ಯಾರ್ಥಿವೇತನದ ಮೊತ್ತವನ್ನು **ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಎವೆನ್ಯೂ ರಸ್ತೆ ಶಾಖೆ, ಬೆಂಗಳೂರು** ಇಲ್ಲಿ ಸಮಾಜದ ಬ್ಯಾಂಕ್ ಉಳಿತಾಯ ಖಾತೆ ಸಂಖ್ಯೆ : **331302010010542 (IFSC Code: UBIN0533131)**ಗೆ ಜಮಾ ಮಾಡಿ ಸಮಾಜದ ಪದಾಧಿಕಾರಿಗಳಿಗೆ ಮಾಹಿತಿ ನೀಡಲು ಕೋರುತ್ತೇವೆ. ಸ್ಥಳೀಯ ಕುಲಾಲ ಸಮುದಾಯದ ಸಂಘ ಸಂಸ್ಥೆಗಳ ಶಿಫಾರಸ್ಸಿನೊಂದಿಗೆ ಪಾರದರ್ಶಕವಾಗಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಪ್ರತಿ ವಿದ್ಯಾರ್ಥಿಗೆ ವಿದ್ಯಾರ್ಥಿ ವೇತನವನ್ನು ವಿತರಿಸುವಾಗ ವಿದ್ಯಾರ್ಥಿವೇತನವನ್ನು ಪ್ರಾಯೋಜಿಸಿದವರ ವಿವರವನ್ನು ಸಹ ಲಿಖಿತವಾಗಿ ತಿಳಿಸಲಾಗುವುದು.

| | | | |
|---|---|---|---|
| **ಜಿ.ಈಶ್ವರ ಮೂಲ್ಯ** | **ಶಂಕರ ಕುಲಾಲ್ ಜನ್ನಾಡಿ** | **ರಮಾನಂದ ಕುಲಾಲ್** | **ಯಾದವ ಕುಲಾಲ್ ಎಂ.** |
| ಅಧ್ಯಕ್ಷರು | ಕಾರ್ಯದರ್ಶಿ | ಕೋಶಾಧಿಕಾರಿ | ಸಾಂಸ್ಕೃತಿಕ ಕಾರ್ಯದರ್ಶಿ |
| 9880663076 | 9448282862 | 9740669480 | 9844813435 |

ಹಾಗೂ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು.